Government of Karnataka
Department of Health and Family Welfare Services
SOTTO Karnataka (Jeevasarthakathe)
6th Floor, East Wing, Arogya Soudha, 1st Cross, Magadi Road, Bengaluru – 560023
E-mail: jsk.sotto@karnataka.gov.in, sottokarnataka23@gmail.com
Ph: 080-23295636 | Mob: +91 98450 06768

No: SOTTO(JSK)/4/2025 (E-1811207) **Date: 04/11/2026**

NOTIFICATION

Inviting Applications for the Post of IT Consultant under SOTTO Karnataka (Jeevasarthakathe)

The State Organ and Tissue Transplant Organisation, Karnataka (SOTTO – Jeevasarthakathe), Department of Health and Family Welfare Services, invites applications from eligible candidates for the following vacant post, to be filled on a purely temporary and contractual basis up to 31.03.2027. The contract may be renewed based on performance and requirement. Details are available at www.jeevasarthakathe.karnataka.gov.in and https://hfwcom.karnataka.gov.in.

Applications in hard copy, along with the enclosures listed below, shall be submitted in person or by post in a sealed envelope superscribed "Application for the Post of IT Consultant – SOTTO" to the Deputy Director (e-Health) & Programme Officer, SOTTO (Jeevasarthakathe), 6th Floor, East Wing, Arogya Soudha, 1st Cross, Magadi Road, Bengaluru – 560023.

Last date for receipt of applications: 13/11/2026, 5:00 PM. Applications received after the last date, or incomplete applications, will not be considered.

Sl. No.	Name of the Post	No. of Posts	Qualification and Experience	Consolidated Pay (per month)	Upper Age Limit
1	**IT Consultant**	01	**Educational Qualification:** B.E./B.Tech/BCA/B.Sc in Computer Science / Information Technology / Data Science / Statistics / Electronics, OR MCA/M.Sc in Computer Science / Information Technology / Data Science, from a recognised university. **Experience:** Minimum 02 years of post-qualification experience in web development, data analysis, IT consulting or AI-based application development, including preparation of reports. **Mandatory:** A portfolio of at least 02 working solutions (e.g., dashboard, website, automation tool, analytical report) developed using Generative AI tools such as Claude, ChatGPT or Gemini. **Desirable:** Certification in Artificial Intelligence; working knowledge of the Transplantation of Human Organs and Tissues Act, 1994 (THOTA) and the Rules thereunder.	Rs. 50,000/-	45 years (as on the last date)

Note:

1. Candidates shall enclose one set of self-attested photocopies of: SSLC marks card (as proof of date of birth), degree certificate(s) and marks cards, experience certificate(s), Aadhaar card and PAN card; two copies of an updated CV; two recent passport-size photographs; and portfolio details (description with links/screenshots of the working solutions).
2. The qualification must be obtained from a recognised university. Preference will be given to candidates who have completed full-time regular courses.
3. Candidates must be proficient in reading, writing and speaking Kannada and English.
4. Selection will be based on merit, relevant experience and performance in the interview, which will include a demonstration of the portfolio.
5. Only shortlisted candidates will be called for the interview, and only selected candidates will be communicated thereafter. All others shall be treated as not selected.
6. No TA/DA will be paid for attending the interview.
7. The engagement is purely contractual and does not confer any right to regular appointment or regularisation.
8. The undersigned reserves the right to reject any or all applications, or to cancel this notification, at any stage of the recruitment without assigning any reason.

Deputy Director (e-Health) & Programme Officer
SOTTO (Jeevasarthakathe), Bengaluru

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ
ರಾಜ್ಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಸ್ಥೆ (SOTTO Karnataka) – ಜೀವಸಾರ್ಥಕತೆ
6ನೇ ಮಹಡಿ, ಪೂರ್ವ ವಿಭಾಗ, ಆರೋಗ್ಯ ಸೌಧ, 1ನೇ ಕ್ರಾಸ್, ಮಾಗಡಿ ರಸ್ತೆ, ಬೆಂಗಳೂರು – 560023
ಇ-ಮೇಲ್: jsk.sotto@karnataka.gov.in, sottokarnataka23@gmail.com
ದೂರವಾಣಿ: 080-23295636 | ಮೊಬೈಲ್: +91 98450 06768

ಸಂಖ್ಯೆ: SOTTO(JSK)/4/2025 (E-1811207) **ದಿನಾಂಕ: 04/11/2026**

ಅಧಿಸೂಚನೆ

SOTTO Karnataka (ಜೀವಸಾರ್ಥಕತೆ) ಅಡಿಯಲ್ಲಿ ಐ.ಟಿ. ಸಲಹೆಗಾರರ (IT Consultant) ಹುದ್ದೆಗೆ ಅರ್ಜಿ ಆಹ್ವಾನ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ರಾಜ್ಯ ಅಂಗಾಂಗ ಮತ್ತು ಅಂಗಾಂಶ ಕಸಿ ಸಂಸ್ಥೆ (SOTTO – ಜೀವಸಾರ್ಥಕತೆ)ಯಲ್ಲಿ ಖಾಲಿ ಇರುವ ಕೆಳಕಂಡ ಹುದ್ದೆಯನ್ನು ದಿನಾಂಕ: 31.03.2027 ರವರೆಗೆ ಸಂಪೂರ್ಣವಾಗಿ ತಾತ್ಕಾಲಿಕ ಹಾಗೂ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕಾರ್ಯಕ್ಷಮತೆ ಹಾಗೂ ಅಗತ್ಯತೆಯ ಆಧಾರದ ಮೇಲೆ ಗುತ್ತಿಗೆಯನ್ನು ನವೀಕರಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ www.jeevasarthakathe.karnataka.gov.in ಹಾಗೂ https://hfwcom.karnataka.gov.in ಜಾಲತಾಣಗಳನ್ನು ನೋಡಬಹುದು.

ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಯನ್ನು ಕೆಳಗೆ ತಿಳಿಸಿರುವ ದಾಖಲೆಗಳೊಂದಿಗೆ, "ಐ.ಟಿ. ಸಲಹೆಗಾರರ ಹುದ್ದೆಗೆ ಅರ್ಜಿ – SOTTO" ಎಂದು ಲಕೋಟೆಯ ಮೇಲೆ ನಮೂದಿಸಿ, ಉಪನಿರ್ದೇಶಕರು (ಇ-ಆರೋಗ್ಯ) ಹಾಗೂ ಕಾರ್ಯಕ್ರಮ ಅಧಿಕಾರಿಗಳು, SOTTO (ಜೀವಸಾರ್ಥಕತೆ), 6ನೇ ಮಹಡಿ, ಪೂರ್ವ ವಿಭಾಗ, ಆರೋಗ್ಯ ಸೌಧ, 1ನೇ ಕ್ರಾಸ್, ಮಾಗಡಿ ರಸ್ತೆ, ಬೆಂಗಳೂರು – 560023 ಇವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಬೇಕು.

ಅರ್ಜಿ ಸ್ವೀಕರಿಸಲು ಕೊನೆಯ ದಿನಾಂಕ: 13/11/2026, ಸಂಜೆ 5:00 ಗಂಟೆ. ಕೊನೆಯ ದಿನಾಂಕದ ನಂತರ ಸ್ವೀಕೃತವಾದ ಅಥವಾ ಅಪೂರ್ಣ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ ಮತ್ತು ಅನುಭವ	ಮಾಸಿಕ ಕ್ರೋಢೀಕೃತ ವೇತನ	ಗರಿಷ್ಠ ವಯೋಮಿತಿ
1	**ಐ.ಟಿ. ಸಲಹೆಗಾರರು (IT Consultant)**	01	**ವಿದ್ಯಾರ್ಹತೆ:** ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಂಪ್ಯೂಟರ್ ಸೈನ್ಸ್ / ಮಾಹಿತಿ ತಂತ್ರಜ್ಞಾನ / ಡೇಟಾ ಸೈನ್ಸ್ / ಸಂಖ್ಯಾಶಾಸ್ತ್ರ / ಎಲೆಕ್ಟ್ರಾನಿಕ್ಸ್ ವಿಷಯದಲ್ಲಿ B.E./B.Tech/BCA/B.Sc ಪದವಿ ಅಥವಾ ಕಂಪ್ಯೂಟರ್ ಸೈನ್ಸ್ / ಮಾಹಿತಿ ತಂತ್ರಜ್ಞಾನ / ಡೇಟಾ ಸೈನ್ಸ್ ವಿಷಯದಲ್ಲಿ MCA/M.Sc ಸ್ನಾತಕೋತ್ತರ ಪದವಿ. **ಅನುಭವ:** ವೆಬ್ ಡೆವಲಪ್‌ಮೆಂಟ್, ಡೇಟಾ ವಿಶ್ಲೇಷಣೆ, ಐ.ಟಿ. ಕನ್ಸಲ್ಟಿಂಗ್ ಅಥವಾ ಕೃತಕ ಬುದ್ಧಿಮತ್ತೆ (AI) ಆಧಾರಿತ ಅಪ್ಲಿಕೇಶನ್ ಅಭಿವೃದ್ಧಿಯಲ್ಲಿ (ವರದಿ ತಯಾರಿಕೆ ಸೇರಿದಂತೆ) ವಿದ್ಯಾರ್ಹತೆಯ ನಂತರದ ಕನಿಷ್ಠ 02 ವರ್ಷಗಳ ಅನುಭವ. **ಕಡ್ಡಾಯ:** Claude, ChatGPT ಅಥವಾ Gemini ನಂತಹ Generative AI ಪರಿಕರಗಳನ್ನು ಬಳಸಿ ಅಭಿವೃದ್ಧಿಪಡಿಸಿದ ಕನಿಷ್ಠ 02 ಕಾರ್ಯನಿರತ ಪರಿಹಾರಗಳ (ಉದಾ: ಡ್ಯಾಶ್‌ಬೋರ್ಡ್, ವೆಬ್‌ಸೈಟ್, ಆಟೋಮೇಷನ್ ಸಾಧನ, ವಿಶ್ಲೇಷಣಾತ್ಮಕ ವರದಿ) ಪೋರ್ಟ್‌ಫೋಲಿಯೊ. **ಅಪೇಕ್ಷಣೀಯ:** AI ಕುರಿತ ಪ್ರಮಾಣಪತ್ರ; ಮಾನವ ಅಂಗಾಂಗಗಳು ಮತ್ತು ಅಂಗಾಂಶಗಳ ಕಸಿ ಕಾಯ್ದೆ, 1994 (THOTA) ಹಾಗೂ ಅದರಡಿಯ ನಿಯಮಗಳ ಕುರಿತು ಕಾರ್ಯಜ್ಞಾನ.	ರೂ. 50,000/-	45 ವರ್ಷಗಳು (ಕೊನೆಯ ದಿನಾಂಕಕ್ಕೆ)

ಸೂಚನೆಗಳು:

1. ಅಭ್ಯರ್ಥಿಗಳು ಈ ಕೆಳಗಿನ ದಾಖಲೆಗಳ ಸ್ವಯಂ ದೃಢೀಕೃತ ಪ್ರತಿಗಳ ಒಂದು ಸೆಟ್ ಲಗತ್ತಿಸಬೇಕು: SSLC ಅಂಕಪಟ್ಟಿ (ಜನ್ಮ ದಿನಾಂಕದ ದಾಖಲೆಯಾಗಿ), ಪದವಿ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳು, ಅನುಭವ ಪ್ರಮಾಣ ಪತ್ರ(ಗಳು), ಆಧಾರ್ ಕಾರ್ಡ್ ಮತ್ತು PAN ಕಾರ್ಡ್; ಜೊತೆಗೆ ನವೀಕೃತ ಸ್ವವಿವರ (CV) – 02 ಪ್ರತಿಗಳು, ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳು – 02 ಹಾಗೂ ಪೋರ್ಟ್‌ಫೋಲಿಯೊ ವಿವರಗಳು (ಪರಿಹಾರಗಳ ವಿವರಣೆ ಮತ್ತು ಲಿಂಕ್/ಸ್ಕ್ರೀನ್‌ಶಾಟ್‌ಗಳು).
2. ವಿದ್ಯಾರ್ಹತೆಯನ್ನು ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪಡೆದಿರಬೇಕು. ಪೂರ್ಣಾವಧಿ ನಿಯಮಿತ ಕೋರ್ಸ್ ಪೂರ್ಣಗೊಳಿಸಿದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
3. ಅಭ್ಯರ್ಥಿಗಳು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಓದುವ, ಬರೆಯುವ ಮತ್ತು ಮಾತನಾಡುವ ಪ್ರಾವೀಣ್ಯತೆ ಹೊಂದಿರಬೇಕು.
4. ಮೆರಿಟ್, ಸಂಬಂಧಿತ ಅನುಭವ ಹಾಗೂ ಸಂದರ್ಶನದಲ್ಲಿನ ಸಾಧನೆಯ (ಪೋರ್ಟ್‌ಫೋಲಿಯೊ ಪ್ರಾತ್ಯಕ್ಷಿಕೆ ಸೇರಿದಂತೆ) ಆಧಾರದ ಮೇಲೆ ಆಯ್ಕೆ ಮಾಡಲಾಗುವುದು.
5. ಕಿರುಪಟ್ಟಿಗೆ ಆಯ್ಕೆಯಾದ ಅಭ್ಯರ್ಥಿಗಳನ್ನು ಮಾತ್ರ ಸಂದರ್ಶನಕ್ಕೆ ಆಹ್ವಾನಿಸಲಾಗುವುದು ಹಾಗೂ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ ಮುಂದಿನ ಮಾಹಿತಿ ನೀಡಲಾಗುವುದು. ಉಳಿದ ಅಭ್ಯರ್ಥಿಗಳನ್ನು ಆಯ್ಕೆಯಾಗಿಲ್ಲವೆಂದು ಪರಿಗಣಿಸಲಾಗುವುದು.
6. ಸಂದರ್ಶನಕ್ಕೆ ಹಾಜರಾಗಲು ಯಾವುದೇ ಪ್ರಯಾಣ/ದಿನ ಭತ್ಯೆ (TA/DA) ನೀಡಲಾಗುವುದಿಲ್ಲ.